ಶೀಲನಾಗಿದ್ದಾನೆಂದು ಅವನನ್ನು ಕರೆದು ಏನನ್ನೂ ಕೇಳಲಿಲ್ಲ.

ತನ್ನ ಪ್ರಪಂಚದಿಂದ ಈಚೆಗೆ ಬಂದಾಗ ಕಿಟಕಿಯಾಚೆ ಬೆಳಗಾಗ ತೊಡಗಿತ್ತು. ಎದ್ದು ಮೈ ಮುರಿದು ಕಿಟಕಿಯಾಚೆ ನೋಡುತ್ತ ನಿಂತ. ನಿದ್ದೆ ಮಾಡಿದ್ದಷ್ಟೇ ತೃಪ್ತಿಯಾಗಿ, ಆಹ್ಲಾದಕರ ಅನುಭವವಾಯಿತು. ಮತ್ತೆ ಬಂದು ಕುಳಿತ.

ಕಾಗದ, ಪೆನ್ನು ಕೈಗೆತ್ತಿಕೊಂಡ... ಇನ್ನಷ್ಟು ವಿಷಯಗಳು ಮಿದುಳಿನಲ್ಲಿ ಅರಳಿ ಬಂದಿತು...

* * *

### ಸಡಗರದ ದಸರಾ

ಮೈಸೂರಿಗೆ ದಸರಾ ಬಂದಿತು. ಗಂಗ ಮಗಳಿಗೆ ಅರಮನೆ ದೀಪಾಲಂಕಾರ ತೋರಿಸಿಕೊಂಡು ಬಂದಳು. ಇನ್ನು ಸದ್ಯದಲ್ಲಿ ಮೈಸೂರನ್ನು ಬಿಡಬೇಕಿತ್ತು. ಮುಂದೆ ಮೈಸೂರಿನ ಈ ವೈಭವ ನೋಡುವುದಕ್ಕಾಗುವುದಿಲ್ಲ. ಹಿಂದೆ ಎಂದೊ ತೀರಾ ಸಣ್ಣ ಮಗುವಾಗಿದ್ದಾಗ ಪಾಪುವನ್ನು ಯಾರದ್ದೊ ಜೊತೆ ಮಾಡಿಕೊಂಡು ತನ್ನೊಡನೆ ದೀಪಾಲಂಕೃತ ಅರಮನೆ, ತೋರಿಸಿಕೊಂಡು ಬಂದಿದ್ದಳು ಗಂಗೆ. ಪಾಪುಗೆ ಅದು ಮರೆತು ಹೋಗಿತ್ತು. ಇದು, ನೆನಪಿನಲ್ಲಿ ಸದಾಕಾಲ ಇಟ್ಟುಕೊಳ್ಳುವ ವಯಸ್ಸು. ದಸರಾದ ಜನಸಂದಣಿ ವಿಪರೀತವಾಗಿರುತ್ತೆ. ಸುತ್ತಮುತ್ತಲ ಊರು, ಹಳ್ಳಿಗಳ ಜನರೊಡನೆ ದೂರದಿಂದ ವಿದೇಶದಿಂದಲೂ ಜನ ಬಂದು ಮುಕುರುತ್ತಿದ್ದರು. ಆ ಪರಿಚಿತರ ಈ ಗುಂಪಿನಲ್ಲಿ ಸ್ಥಳೀಯರಿಗೇ ಸ್ಥಾನವಿರುವುದಿಲ್ಲ. ಮೈಸೂರಲ್ಲೇ ಇದ್ದರೂ ದಸರೆಯ ಮೈಸೂರಿನವರು ತಮ್ಮೂರನ್ನು ಪರಸ್ಥಳ ಎನ್ನುವಷ್ಟು ಅದು ಬದಲಿಸಿ ಹೋಗುತ್ತದೆ.

ಮತ್ತೆ ನೋಡಲು ಸಿಗದ ನೋಟ ನೋಡಲೆಂದು ಗಂಗೆ ನೂಕು ನುಗ್ಗಲಿನಲ್ಲಿ ಅರಮನೆಗೆ ಹೊರಟಳು. ಹೆಬ್ಬಾಗಿಲಲ್ಲೇ ಇದ್ದ ಹನುಮಂತನ ಗುಡಿಗೆ ಹೋಗೋಣ ಎಂದುಕೊಂಡಳು. ಅಲ್ಲಿ ಅಸಾಧ್ಯ ಜನ ತುಂಬಿ ಬಿಟ್ಟದ್ದರಿಂದ ಹೊರಗಿಂದಲೇ ಕೈಮುಗಿದು–

'ದ್ಯಾವ್ರೇ... ಈ ಕೂಸಿಗೆ ಮುಂದಿನ ದಿನಗಳು ಸುಖವಾಗಿರಲಿ... ಕಾಪಾಡಪ್ಪಾ...' ಎಂದು ಬೇಡಿಕೊಂಡಳು. ಅಲ್ಲಿಂದ ಅರಮನೆ ಆವರಣ ಹೊಕ್ಕರು. ಆಗಲೇ ಸಂಜೆ ಕಳೆದು ಕತ್ತಲಾವರಿಸಿತು. ಕತ್ತಲನ್ನು ಮಿಂಚಿಸುವಂತೆ ಜಗ್ಗನೆ ಅರಮನೆಯ ಸಹಸ್ರಾರು ವಿದ್ಯುತ್ ದೀಪಗಳು ಬೆಳಗಿ ಬಿಟ್ಟವು. ಈ ಅನಿರೀಕ್ಷಿತ ಬೆಳಕಿನ ರಾಜ ವೈಭವ ಪಾಪೂಗೆ ಜಗ್ಗೆನಿಸಿತು.

'ಅವ್ವಾ...! ಅದ್ಹೆಂಗೆ ಒಮ್ಮೆಗೇ ಅಷ್ಟೂ ದೀಪ ಹೊತ್ತಿಕೊಂಡ್ವು...?' ಗಂಗೆ ತಾನು ಕೇಳಿ ತಿಳಿದದ್ದನ್ನು ಹೇಳಿದಳು, 'ಅದೇ ಆ ಸಿಂಗಾಸನ ಐತಲ್ಲಾ ಅದ್ರಾಗೆ ಒಂದು ಸ್ವಿಚ್ ಅವೆಯಂತೆ. ಹಿಂದೆಲ್ಲಾ ಮಾರಾಜ್ರು ಸಿಂಹಾಸನ ಹತ್ತಿ ದರ್ಬಾರಿಗೆ ಕೂರುತಿದ್ರು, ಅವರು ಸಿಂಹಾಸನದ ಮೆಟ್ಟಲು ಏರಿದ ತಕ್ಷಣ ಆ ಸ್ವಿಚ್ ದೀಪಾನೆಲ್ಲಾ ಒಟ್ಟಿಗೇ ಹೊತ್ತಿಸಿ ಬಿಡ್ತಂತೆ... ಈಗ ಹೆಂಗೇ ತಿಳೀದು ಪೋರಿ. ಅದೆ ಅದೆಷ್ಟು ಛಲೋದಾಗಿ ಒಮ್ಮೆಗೆ ಆಟೂ ದೀಪ ಹತ್ತಿ ತಲ್ವಾ...?'

'ಹೌದವ್ವಾ... ಬಾಳ ಛಲೊ ಐತೆ...!' ಎಂದು ತಾಯಿಯೊಡನೆ ಹುಲ್ಲು ಹಾಸಿಗೆ ಮೇಲೆ ಕೂತಳು. ಕಡ್ಲೆಕಾಯಿ ಮಾರುವವನು ಪ್ರತ್ಯಕ್ಷನಾದ. ಗಂಗೆ ಅದನ್ನು ಕೊಂಡು ಮಗಳೊಡನೆ ಒಂದೊಂದೇ ಕಾಳು ಸವಿಯತೊಡಗಿದಳು.

ಹೊತ್ತು ಕಳೆದದ್ದೇ ಅರಿವಿಗೆ ಬರಲಿಲ್ಲ.

ನಾಲ್ಕಾರು ದಿನದ ಮೇಲೆ ಎಕ್ಸಿಬಿಷನ್ನಿಗೂ ಕರೆದೊಯ್ದಳು. ಅಲ್ಲೂ ಜನವೊ ಜನ. ಅಂಗಡಿ ಸಾಲಿನ ಮಾರಾಟದ ವಸ್ತುಗಳು, ಅಲಂಕಾರ ನೋಡಿ ಪಾಪುವಿಗಿಂತಾ ಹೆಚ್ಚು ವಿಸ್ಮಯಗೊಂಡಳು ಗಂಗೆ. ಅವಳೆಂದೂ ಈ ವಸ್ತು ಪ್ರದರ್ಶನ ನೋಡಿರಲಿಲ್ಲ. ಆ ಜನ ಜಂಗುಳಿಯಲ್ಲಿ ಮಗು ಎಲ್ಲಿ ತಪ್ಪಿಸಿಕೊಂಡು ಬಿಡುವಳೊ ಎಂದು ಅವಳ ಕೈ ಭದ್ರವಾಗಿ ಹಿಡಿದುಕೊಂಡೇ ಸುತ್ತಾಡಿದಳು. ಇಲ್ಲಿ ಮಗಳಿಗೆ ಏನಾದರೂ ಕೊಡಿಸಬೇಕೆಂದು ಗಂಗೆಯ ಆಸೆ. ಬಳೇ ಅಂಗಡಿ, ಬಟ್ಟೆ ಅಂಗಡಿಗಳ ಮುಂದೆ ನಿಂತೇ ಬಿಡುತ್ತಿದ್ದಳು. ಒಮ್ಮೊಮ್ಮೆ ಹೋಗಿ ಬೆಲೆ ವಿಚಾರಿಸುತ್ತಿದ್ದಳು. ಹೆಚ್ಚು ಬೆಲೆ ಎನ್ನಿಸಿದರೂ ಅವಳಿಗೆ ಫ್ರಾಕು, ಬಳೆ ಕೊಡಿಸಿ, ತಿನ್ನಲು ಕಾಟನ್‌ಕ್ಯಾಂಡಿ ಕೊಡಿಸಿದಳು. ಅದು ಪುಸಕ್ಕನೆ ಅತಿ ಕಿರಿದಾಗಿ ಪಾಪೂನ ತುಟಿಗಳನ್ನು ಕೆಂಪಾಗಿಸಿದಾಗ ಜೋರಾಗಿ ನಕ್ಕು, ಗೊಂಬೆಯಂತೆ ಕಂಡ ಮಗಳನ್ನು ಮುದ್ದು ಮಾಡಿ ನೋಡಿದಳು. ಇಲ್ಲಿ ಎಲ್ಲರೂ ಅಪರಿಚಿತರು. ಯಾರ ಭಯವೂ ಇರದೆ, ಸ್ವತಂತ್ರವಾಗಿ ತಿರುಗಾಡಿದಳು. ಪಾಪು ಚಿಟ್ಟೆಯಂತೆ ತನ್ನ ತುಂಟತನ ಬಿಚ್ಚಿಕೊಂಡು ಅಂಗಡಿಯಿಂದ ಅಂಗಡಿಗೆ ಹಾರಾಡಿ ಖುಷಿಪಟ್ಟುಕೊಂಡಳು. ಸ್ವಲ್ಪ ದೂರದಲ್ಲಿ ಗಂಗಾಗೆ ಬ್ಯಾಡಗಿ ಮೆಣಸಿನಕಾಯಿ ಬೋಂಡಾ ಕರಿಯುತ್ತಿದ್ದ ಅಂಗಡಿ ನೋಡಿ ಬಾಯಲ್ಲಿ ನೀರಾಡಿತು. ಸಡಗರದಿಂದ ಪಾಪೂನ ಜೊತೆ ಅಲ್ಲಿಗೆ ಹೋದಳು.

'ಓ...! ನಮ್ಮೂರ ಕಡಿ ದುಕಾನು ಅದ... ಪೋರಿ ನೋಡವ್ವಾ...! ಮೆಣಸಿನಕಾಯಿ ಬೋಂಡ... ಮಸ್ತು ಛಂದಿರುತ್ತೆ...'

'ನಮ್ಮೂರು ಅಂದ್ರೆ ಯಾವ್ದವ್ವಾ... ಇದೇ ಅಲ್ವ ನಮ್ಮೂರು...'

'ಅಲ್ಲಾ... ಹ್ಯಾಗೆ ಕನ್ನಡ ಮಾತಾಡ್ತಿಕ್ ಹತ್ತೀನಿ ಕಂಡಿಲ್ಯಾ... ಮೈಸೂರ ಮಂದಿ ಪ್ರಸಾದಪ್ಪ ಮಾತಾಡ ಹಾಂಗ ಮಾತಾಡಾತ್ತಾರೆ... ನಮ್ಮದು ಬ್ಯಾರೇ ಊರು ಐತೆ... ನಮ್ಮೂರ ಕಡೆಯ ಈ ಬ್ಯಾಡಗಿ ಮೆಣಸಿನಕಾಯಿ ಬೋಂಡ ಕೊಡಸ್ತೀನಿ... ತಿನ್ನು...' ಎಂದು ಬೊಂಡ ಕೊಂಡು ತಾನೇ ಮೊದಲು ತಿನ್ನಲು ಪ್ರಾರಂಭಿಸಿದಳು. ಪಾಪು ಆಸಕ್ತಿ ತೋರಲೇ ಇಲ್ಲ.

'ತಿನ್ನು ಪೋರೀ...'

'ನಂಗೆ ಹಸಿವಿಲ್ಲ, ದೊಡ್ಡದು ಸಿಹಿ ಪುಗ ತಿಂದ್ನಲ್ಲವ್ವಾ'

'ಆದ್ರೆ.... ಈ ಬೋಂಡ ರುಚಿನಾದ್ರೂ ನೋಡವ್ವಾ.... ನಮ್ಮೂರ ಮಿರ್ಚಿ ಹೆಂಗಿರ್ತದೆ ನೋಡಾ....

ತಾಯಿಯ 'ನಮ್ಮೂರು .... ನಮ್ಮೂರ ಬೋಂಡಾ.... ನಮ್ಮ ಕನ್ನಡ' ಇವೆಲ್ಲಾ ಪಾಪೂಗೆ ಹೊಸ ವಿಷಯವಾಯಿತು...

'ನಿಮ್ಮೂರು ಎಲ್ಲದೆ?...'

'ದೂರ... ಧಾರವಾಡ... ಹುಬ್ಳಿ ಅತ್ತ ಕಡೆ ... ಅಲ್ಲಿ ನೆಂಟರು ಮಸ್ತ ಅದಾರೆ....' ಬಾಯಿತಪ್ಪಿ ಅವೇನೊ ಅಂದುಬಿಟ್ಟಳು. ಪಾಪು ತಕ್ಷಣ ಕೇಳಿದಳು,

'ಮತ್ತು.... ಇಲ್ಯಾಕೆ ಒಬ್ಬಾಕೀನೇ ಬಂದಿ?... ಎಲ್ಲಾರ್ನೂ ಬಿಟ್ಟು?' ನಿಂಗ್ ಅವ್ವ, ಅಪ್ಪ ಎಲ್ಲ ಅದಾರು?...'

'ಇಲ್ಲವ್ವಾ... ಎಲ್ರೂ ಸತ್ತೋದ್ರು... ಅದ್ಕೇ ಮೈಸೂರಿಗೆ ಬಂದ್ನವ್ವಾ....' ಎಂ ಏನೇ ಒಂದು ಹೇಳಿ, ಮಗನ ಗಮನ ಬೇರೆ ಕಡೆ ಸರಿಯಲು ಹೇಳಿದಳು, 'ಅಕಾ ಅಲ್ನೋಡು ಇಂದ್ರಾಗಾಂಧಿ.. ದೊಡ್ಡ ಚಕ್ರ, ಉಯ್ಯಾಲೆ ಎಲ್ಲಾ ಆಡ್ಲಿಕ್ಕೆ ಹಾಕಾರ.... ಚಕ್ರದಾಗೆ ಕುಂತ್ರೆ ಆಕಾಶಕ್ಕೆ ಹೋಗಬಹ್ದು.... ಕೂತು ಹೋಗ್ತೀಯಾ....'

'ಹುಂ'

'ನಡಿ.... ಅಲ್ಲಿ ಹೋಗಾನ....' ಮಕ್ಕಳ ಆಟದ ಸ್ಥಳಕ್ಕೆ ಹೋದಾಗ ಅಲ್ಲಿ ಗಂಗೆಗೆ ಪರಿಚಿತರೊಬ್ಬರು ಸಿಕ್ಕಿಬಿಟ್ಟರು, ಆ ಮನುಷ್ಯ ಕೇಳಿದ,



## ಇಲ್ಲಿಯವರೆಗೆ

ಶಿವಣ್ಣ ಕಟ್ಟಿದ ತಾಳಿ ಕಿತ್ತು ಎಸೆಯುತ್ತಾಳೆ. ಈ ಮಧ್ಯೆ ಪ್ರಸಾದನನ್ನು ಭೇಟಿಯಾಗಲು ತೋಟದಲ್ಲಿ ಮಗಳೊಂದಿಗೆ ಕಾಯುತ್ತಿದ್ದ ಗಂಗಾಳಿಗೆ ಪ್ರಸಾದನ ಭೇಟಿ ಮನಸ್ಸಿಗೆ ಖುಷಿ ನೀಡುತ್ತದೆ. ತನ್ನ ಗಂಡ ಶಿವಣ್ಣ ಎಂದು ಹೇಳಿದಾಗ ಪ್ರಸಾದನಿಗೆ ಅಚ್ಚರಿ ಆಗುತ್ತದೆ. ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುತ್ತಾನೆ ಪ್ರಸಾದ. ಗಂಗೆ ಪ್ರಸಾದನ ಕ್ಷಮೆ ಕೇಳುತ್ತಾಳೆ. ಇಲ್ಲಿದ್ದರೆ ಶಿವಣ್ಣ ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ. ಈ ಊರು ಬಿಟ್ಟು ಬೇರೆ ಊರಿಗೆ ಹೋಗಿ ಜೀವನ ಮಾಡೋಣ ಎಂದು ಗಂಗಾ ಪ್ರಸಾದನಿಗೆ ಸಲಹೆ ಮಾಡುತ್ತಾಳೆ.